# ‘ಕುವೆಂಪು ಅವರ ಅನಿಕೇತನ ನಿಲುವು ನನ್ನದೂ ಹೌದು’

ಹಿಮಾಂಶಿ ಶೆಲತ್ ವಿಶಿಷ್ಟ ಲೇಖಕಿ ಮತ್ತು ವ್ಯಕ್ತಿ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕಥೆಗಾರ್ತಿ. ಅವರ ಬದುಕು, ಸಾಮಾಜಿಕ–ಸಾಂಸ್ಕೃತಿಕ ನಿಲುವುಗಳು, ಬರವಣಿಗೆಯಲ್ಲಿನ ಅಪೂರ್ವ ಶೈಲಿ, ಈ ಎಲ್ಲವುಗಳನ್ನೂ ಬೇರೆ ಮಾಡಿ ನೋಡಲಾಗದ ಅಖಂಡತೆಯಲ್ಲಿ, ವಿಶ್ವಾಸಾರ್ಹತೆಯಲ್ಲಿ ಬದುಕುತ್ತಿರುವವರು. ನಡೆ ನುಡಿಯ ಅಂತರವನ್ನು ಇಲ್ಲವಾಗಿಸಿಕೊಳ್ಳುತ್ತಾ ಹೋಗುತ್ತಿರುವ ಇವರ ಜೊತೆ ಮಾತನಾಡುವುದೇ ಒಂದು ಅನುಭವ. 2024ರ ‘ಕುವೆಂಪು ರಾಷ್ಟ್ರೀಯ ಪುರಸ್ಕಾರ’ಕ್ಕೆ ಪಾತ್ರರಾದ ಗುಜರಾತಿನ ಈ ಬರಹಗಾರ್ತಿಯೊಂದಿಗೆ ‘ಸುಧಾ’ಕ್ಕಾಗಿ ನಡೆಸಿದ ಮಾತುಕತೆಯ ಆಯ್ದ ಭಾಗಗಳು.



■ ಎಂ.ಎಸ್. ಆಶಾದೇವಿ
ಫೋಟೊಗಳು: ಎಂ.ಎಸ್. ಮಂಜುನಾಥ್

## ಗುಜರಾತ್ ಲೇಖಕಿ ಹಿಮಾಂಶಿ ಶೆಲತ್ ವಿಶೇಷ ಸಂದರ್ಶನ




◆ **ನಿಮ್ಮೊಳಗಿನ ಲೇಖಕಿಯನ್ನು ನೀವು ಕಂಡುಕೊಂಡ ಗಳಿಗೆಯ ಬಗ್ಗೆ, ಆ ಮೊದಲ ಬರವಣಿಗೆಯ ಬಗ್ಗೆ ಹೇಳಿ.**

ಅದು ನಾನು ಹತ್ತಿರದಿಂದ ನೋಡಿದ ಹುಡುಗಿಯೊಬ್ಬಳ ಬಗೆಗೆ ಬರೆದುದಾಗಿತ್ತು. ಅವಳಿಗೆ ಮದುವೆ ಗೊತ್ತಾಗಿತ್ತು. ಅವಳು ಗೊಂದಲದಲ್ಲಿ ಮುಳುಗಿದ್ದಳು. ಅವಳಿಗೆ ಏನು ಬೇಕು, ಏನು ಬೇಡ ಎನ್ನುವುದನ್ನು ಕೇಳುವ ತೊಂದರೆಯನ್ನು ಯಾರೂ ತೆಗೆದುಕೊಂಡಿರಲಿಲ್ಲ. ಅವಳು ಬೆಳೆದ ವಾತಾವರಣದಲ್ಲಿ ಅದನ್ನು ಹೇಳುವ ಧೈರ್ಯವೂ ಅವಳಿಗಿರಲಿಲ್ಲ. ಅವಳ ಕಣ್ಣುಗಳಲ್ಲಿ ಹೆಪ್ಪುಗಟ್ಟಿದ್ದ ನೋವು, ವಿಷಾದ ನನ್ನನ್ನು ಆಳವಾಗಿ ಕಾಡಿತು. ಆಗಲೇ ನಾನು ಬರೆದದ್ದು ‘ಕತ್ತಲ ಬಾವಿಯೊಳಗೆ ಏಳು ಹೆಜ್ಜೆಗಳು’ ಎನ್ನುವ ಕಥೆಯನ್ನು.

◆ **ನಿಮ್ಮ ಬದುಕಿನ ಅಸ್ತಿವಾರವನ್ನು ನಿಮ್ಮ ಬಾಲ್ಯವೇ ನಿರ್ಧರಿಸಿದೆ ಎನ್ನಿಸುತ್ತದೆ ಅಲ್ಲವೆ?**

ಖಂಡಿತ ಹೌದು. ನನ್ನ ಬಾಲ್ಯದ ಪರಿಸರ ನಿಜಕ್ಕೂ ಮುಕ್ತವಾಗಿತ್ತು. ವಿದ್ಯಾಭ್ಯಾಸದಿಂದ ಹಿಡಿದು ನನ್ನ ವೃತ್ತಿ, ವೈಯಕ್ತಿಕ ಬದುಕು ಎಲ್ಲದರಲ್ಲೂ ಬೇಕಾದ್ದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ನನಗಿತ್ತು. ಶಿಕ್ಷಣದಲ್ಲಿ ನನಗೆ ಯಾವುದು ಬೇಕೋ ಅದನ್ನು ನಾನು ಆರಿಸಿಕೊಂಡೆ. ಆಗಲೂ ಅವರು ನನಗೆ ಸಲಹೆ ನೀಡಿದರೇ ಹೊರತು ನಿರ್ದೇಶನವನ್ನಲ್ಲ. ನಮಗೆ ಗಣಿತ ಅಥವಾ ಚಿತ್ರಕಲೆ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಬಹುದಾಗಿತ್ತು. ಗಣಿತದಲ್ಲಿ ನನ್ನದು ಯಾವಾಗಲೂ ಶೂನ್ಯ ಸಂಪಾದನೆ! ಆದ್ದರಿಂದ ಚಿತ್ರಕಲೆಯನ್ನು ಆರಿಸಿಕೊಂಡೆ. ನನ್ನ ಪ್ರಕಾರ ನಾನು ತುಂಬಾ ಚೆನ್ನಾಗಿ ಚಿತ್ರಗಳನ್ನು ಬರೆದಿದ್ದೆ, ಆದರೆ ನನಗೆ ಬಂದದ್ದು ಬರೇ 42 ಅಂಕಗಳು. ತುಂಬಾ ದುಃಖವಾಯಿತು. ಆ ಅಧ್ಯಾಪಕರು ನನ್ನ ಚಿತ್ರಕಲೆಯನ್ನು ಸರಿಯಾಗಿ ನೋಡಿರಲಿಲ್ಲ ಅಂತಲೇ ಈಗಲೂ ನಾನು ನಂಬಿದ್ದೇನೆ! ಆಗ ನನ್ನ ತಾತ ಹೇಳಿದರು, ‘ನೋಡು, ಚಿತ್ರಕಲೆಯನ್ನ ಬೇಕಾದರೆ ನಿನ್ನ ಹವ್ಯಾಸವಾಗಿ ಉಳಿಸಿಕೋ, ವೃತ್ತಿಯಾಗಿ ಅಲ್ಲ. ಯಾಕೆ ಅಂದ್ರೆ, ನಿನ್ನ ಪೇಂಟಿಂಗ್ಸ್ ಮಾರಾಟ ಆಗದೇ ಇದ್ರೆ ಏನು ಮಾಡ್ತೀಯಾ? ಸಾಹಿತ್ಯವನ್ನೋ ಮತ್ತೊಂದನ್ನೋ ಶಿಕ್ಷಣಕ್ಕೆ ಆರಿಸಿಕೋ’. ಹೀಗಾಗಿ ನಾನು ಸಾಹಿತ್ಯಕ್ಕೆ ಹೊರಳಿದೆ. ಇಂಗ್ಲಿಷ್ ಎಂ.ಎ. ಮಾಡಿದೆ. ನಯಪಾಲ್ ಮೇಲೆ ಪಿಎಚ್.ಡಿ. ಮಾಡಿದೆ. ಸೂರತ್‌ನಲ್ಲೇ ಇಂಗ್ಲಿಷ್ ಅಧ್ಯಾಪಕಿಯಾಗಿ ಕೆಲಸವನ್ನೂ ಮಾಡಿದೆ. ಆದರೆ ಚಿತ್ರಕಲೆ ನನ್ನ ಆದ್ಯತೆಯಾಗಿ, ಪ್ರೀತಿಯಾಗಿ ಈ ತನಕವೂ ಉಳಿದುಕೊಂಡು ಬಂದಿದೆ.

ನನ್ನ ಬಾಲ್ಯದ ಬಗ್ಗೆ ಇನ್ನೂ ಕೆಲವು ಅಂಶಗಳನ್ನು ಹೇಳಬೇಕು ನಿಮಗೆ. ನಮ್ಮ ಮನೆಯ ವಾತಾವರಣ ಗಾಂಧಿಮಯವಾಗಿತ್ತು. ಬದುಕು ಸರಳವಾಗಿರಬೇಕು ಅಂತ ನನ್ನ ತಾತ ಹೇಳಿದ್ರೆ, ನನ್ನ ಅಜ್ಜಿ ‘ಮನೆಯ ಕೆಲಸವನ್ನು ಆದಷ್ಟೂ ನಾವೇ ಮಾಡಿಕೊಳ್ಳಬೇಕು, ಇದ್ದ ಕೆಲವು ಕೆಲಸದವರನ್ನ ಮನೆಯವರ ತರಾನೇ ನೋಡ್ಕೋಬೇಕು’ ಅಂತ ಹೇಳ್ತಾ ಇದ್ದರು. ಅವರನ್ನು ಪ್ರೀತಿಯಲ್ಲಿ, ಗೌರವದಲ್ಲಿ ನಡೆಸಿಕೊಳ್ಳಬೇಕು ಅನ್ನುವುದನ್ನ ಅವರ ನಡವಳಿಕೆಯ ಮೂಲಕವೇ ನಮಗೆ